ಕುಶಾಲನಗರ

ಯೋಜನಾ ಪ್ರಾಧಿಕಾರ



Goddess Kaveri

ಕುಶಾಲನಗರ – 571234





2021–22ನೇ ಸಾಲಿನ

ವಾರ್ಷಿಕ ವರದಿ

1 ಪೀಠಿಕೆ:–

ಕುಶಾಲನಗರ ಪಟ್ಟಣವು ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ಮುಖ್ಯ ಕೇಂದ್ರವಾಗಿದ್ದು, 2011ರ ಜನಗಣತಿಯಂತೆ 15,326 ಜನಸಂಖ್ಯೆಯನ್ನು ಹೊಂದಿರುತ್ತದೆ. ಕುಶಾಲನಗರ ಪಟ್ಟಣ ಪಂಚಾಯಿತಿಯು ಈ ಪಟ್ಟಣಕ್ಕೆ ಸ್ಥಳೀಯ ಸಂಸ್ಥೆಯಾಗಿರುತ್ತದೆ. ಈ ನಗರವು ಮಂಜಿನ ನಗರ ಮಡಿಕೇರಿಯಿಂದ 32 ಕಿ.ಮೀ. ಮತ್ತು ರಾಜ್ಯದ ಸಾಂಸ್ಕೃತಿಕ ನಗರ ಮೈಸೂರಿನಿಂದ 91 ಕಿ.ಮೀ. ಹಾಗೂ ರಾಜ್ಯದ ರಾಜಧಾನಿ ಬೆಂಗಳೂರಿನಿಂದ 236 ಕಿ.ಮೀ. ಅಂತರದಲ್ಲಿರುತ್ತದೆ. ಬೆಂಗಳೂರು–ಬಂಟ್ವಾಳ ರಾಷ್ಟ್ರೀಯ ಹೆದ್ದಾರಿ–275 ಮತ್ತು ಕಣ್ಣಾನೂರು–ಮಾಕ್ಕುಟ್ಟ ರಾಜ್ಯ ಹೆದ್ದಾರಿ–91 ಹಾಗೂ ಈ ನಗರದ ಮೂಲಕ ಹಾದುಹೋಗುವ ಮುಖ್ಯ ಹೆದ್ದಾರಿಗಳಾಗಿವೆ.

ಕುಶಾಲನಗರ ತಾಲ್ಲೂಕಿನ ಬಹುಪಾಲು ಭೂಭಾಗವು ಅರಣ್ಯ ಪ್ರದೇಶ ಹಾಗೂ ಬೆಟ್ಟ ಶ್ರೇಣಿಗಳಿಂದ ಕೂಡಿರುತ್ತದೆ. ಕೊಡಗು ಜಿಲ್ಲೆಯಲ್ಲಿ ಹಲವಾರು ಪ್ರೇಕ್ಷಣೀಯ ತಾಣಗಳು ಹಾಗೂ ಯಾತ್ರಾಸ್ಥಳಗಳಿದ್ದು ಇವುಗಳಿಂದಾಗಿ ಕುಶಾಲನಗರ ಪಟ್ಟಣದ ಮೇಲೆ ನೇರ ಪರಿಣಾಮ ಬೀರುತ್ತವೆ. ಈ ಹಿನ್ನೆಲೆಯಲ್ಲಿ ಪಟ್ಟಣವನ್ನು ಯೋಜನಾ ಬದ್ದವಾಗಿ ಅಭಿವೃದ್ದಿಪಡಿಸುವ ದೃಷ್ಟಿಯಿಂದ ಕುಶಾಲನಗರ ಪಟ್ಟಣವು ಸೇರಿದಂತೆ ಸುತ್ತಮುತ್ತಲ ಗ್ರಾಮಗಳನ್ನು ಸೇರಿಸಿಕೊಂಡು ಸರ್ಕಾರವು ಒಟ್ಟು 1105 ಹೆಕ್ಟೇರ್ ವಿಸ್ತೀರ್ಣಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಸಿ)ರನ್ವಯ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿ, ಸದರಿ ಪ್ರದೇಶಕ್ಕೆ ಕುಶಾಲನಗರ ಯೋಜನಾ ಪ್ರಾಧಿಕಾರವನ್ನು ರೂಪಿಸಿ ಆದೇಶ ಹೊರಡಿಸಿರುತ್ತದೆ.

ಅ) ಪ್ರಾಧಿಕಾರದ ಉದ್ದೇಶಗಳು:–

ಕುಶಾಲನಗರ ಯೋಜನಾ ಪ್ರಾಧಿಕಾರವು ಸರ್ಕಾರದ ಆದೇಶ ಸಂಖ್ಯೆ:ನಅಇ/483/ಮೈಅಪ್ರಾ/2006 ದಿನಾಂಕ: 18–02–2008 ರನ್ವಯ ರಚನೆಯಾಗಿದ್ದು, ದಿನಾಂಕ: 18–02–2008 ರಿಂದ ಕಾರ್ಯಾರಂಭ ಮಾಡಿರುತ್ತದೆ. ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ–1961 ರನ್ವಯ ಕಾರ್ಯನಿರ್ವಹಿಸಬೇಕಾಗಿದ್ದು, ಸ್ಥಳೀಯ ಯೋಜನಾ ಪ್ರದೇಶದ/ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ಸಂಸ್ಥೆ (ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ) ಗಳಿಗೆ ತಾಂತ್ರಿಕ ವಿಷಯಗಳಲ್ಲಿ ನೆರವು ನೀಡುವುದು ಹಾಗೂ ಖಾಸಗಿ ಬಡಾವಣೆಗಳಿಗೆ ತಾಂತ್ರಿಕ ಅನುಮೋದನೆ ನೀಡುವುದು ಮತ್ತು ಯೋಜನಾಬದ್ಧವಾಗಿ ಅಭಿವೃದ್ಧಿಗಳನ್ನು ನಿಯಂತ್ರಿಸುವುದು ಪ್ರಾಧಿಕಾರದ ಮುಖ್ಯ ಧ್ಯೇಯವಾಗಿದೆ. ಈ ವ್ಯಾಪ್ತಿಯಲ್ಲಿ ನೀಡಲಾಗುವ ಅನುಮತಿಗಳಿಗೆ ಪ್ರಾಧಿಕಾರವು ಪರಿಶೀಲನಾ ಶುಲ್ಕ ಮತ್ತು ಇತರೆ ಶಾಸನಬದ್ಧ ಶುಲ್ಕಗಳನ್ನು ಭರಿಸುತ್ತಿದೆ.

ಆ) ಕಾರ್ಯಕ್ರಮಗಳು:–

ಪ್ರಾಧಿಕಾರವು ತನ್ನ ವ್ಯಾಪ್ತಿಗೆ ಮಹಾಯೋಜನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆ ಪಡೆಯುವ, ಕಾಯ್ದೆಯನ್ವಯ ಮಹಾಯೋಜನೆಯನ್ನು ಪರಿಷ್ಕರಿಸುವ, ಮಹಾಯೋಜನೆ ರೀತ್ಯಾ ಅಭಿವೃದ್ಧಿಗಳನ್ನು ನಿಯಂತ್ರಿಸುವ ಮತ್ತು ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಖಾಸಗೀ ಬಡಾವಣೆಗಳಿಗೆ ಅನುಮೋದನೆ ನೀಡುವ ಹಾಗೂ ಕಾರ್ಯಗತಗೊಳಿಸುವ ಮತ್ತು ಮಹಾಯೋಜನೆಯಂತೆ ವಿವಿಧ ಭೂ–ಉಪಯೋಗಗಳನ್ನು ನಿಯಂತ್ರಿಸುವ ಮುಖ್ಯಕಾರ್ಯ ಚಟುವಟಿಕಗಳನ್ನು ಹೊಂದಿರುತ್ತದೆ.

2. ಆಡಳಿತಾತ್ಮಕ ರಚನೆ:–

ಅ) ಕುಶಾಲನಗರ ಯೋಜನಾ ಪ್ರಾಧಿಕಾರವು 2021–22 (ದಿನಾಂಕ: 31–01–2022 ರಲ್ಲಿದ್ದಂತೆ) ನೇ ಸಾಲಿನಲ್ಲಿ ಕೆಳಕಂಡಂತೆ ಆಡಳಿತ ವ್ಯವಸ್ಥೆ ಹೊಂದಿರುತ್ತದೆ.

ಕ್ರ. ಸಂ	ಹೆಸರು	ಪದನಾಮ	ಅವಧಿ
01	ಶ್ರೀ ಎಂ.ಎಂ. ಚರಣ್,	ಅಧ್ಯಕ್ಷರು	ದಿ: 05–08–2020 ರಿಂದ
02	ಶ್ರೀ ಎ.ಎನ್. ಪ್ರವೀಣ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು / ಸದಸ್ಯ ಕಾರ್ಯದರ್ಶಿ	ಸದಸ್ಯ ಕಾರ್ಯದರ್ಶಿ	ದಿ: 08–01–2021 ರಿಂದ
03	ಮುಖ್ಯಾಧಿಕಾರಿ/ಆಡಳಿತಾಧಿಕಾರಿ ಪಟ್ಟಣ ಪಂಚಾಯಿತಿ ಕುಶಾಲನಗರ	ಸದಸ್ಯರು	——
04	ಸ್ಥಳೀಯ ಸಂಸ್ಥೆ ಸದಸ್ಯರು ಕುಶಾಲನಗರ ಪಟ್ಟಣ ಪಂಚಾಯಿತಿ ಚುನಾಯಿತ ಸದಸ್ಯರಾದ ಶ್ರೀ ಬಿ. ಅಮೃತ್‌ರಾಜ್ ರವರನ್ನು ಕುಶಾಲನಗರ ಪಟ್ಟಣ ಪಂಚಾಯಿತಿಯಿಂದ ನಾಮನಿರ್ದೇಶನ ಸದಸ್ಯರನ್ನಾಗಿ ನೇಮಕ ಮಾಡಿರುತ್ತಾರೆ.	ಸದಸ್ಯರು	ದಿ: 15–11–2021 ರಿಂದ
04	ಸರ್ಕಾರದಿಂದ ನೇಮಿಸಿರುವ 3 ಜನ ಅಧಿಕಾರೇತರ ಸದಸ್ಯರುಗಳು 1. ಶ್ರೀ ವೈಶಾಖ್ 2. ಪುಂಡರೀಕಾಕ್ಷ ವಿ.ಡಿ. 3. ಶ್ರೀ ಹೆಚ್.ಎಂ. ಮಧುಸೂಧನ್	 ಸದಸ್ಯರು ಸದಸ್ಯರು ಸದಸ್ಯರು	 ದಿ: 05–08–2020 ರಿಂದ ದಿ: 05–08–2020 ರಿಂದ ದಿ: 05–08–2020 ರಿಂದ

ಆ) <u>ಆಡಳಿತಾತ್ಮಕ ವೆಚ್ಚದ ವಿವರ</u> :–

- ಅಧ್ಯಕ್ಷರ ಗೌರವ ಸಂಭಾವನೆ ಹಾಗೂ ಮನೆ ಬಾಡಿಗೆ ಭತ್ಯೆ ಮತ್ತು ಇತರೆ ವೆಚ್ಚ
- ಸದಸ್ಯ ಕಾರ್ಯದರ್ಶಿಯವರ ವೇತನ
- ಸರ್ಕಾರದಿಂದ ನೇಮಕವಾದ ಸದಸ್ಯರ ಗೌರವ ಸಂಭಾವನೆ
- ಹೊರಗುತ್ತಿಗೆ ನೌಕರರ ಸೇವೆಯ ಸಂಭಾವನೆ
- ಸಾದಿಲ್ವಾರು ವೆಚ್ಚ (ಕಟ್ಟಡ ಬಾಡಿಗೆ, ದೂರವಾಣಿ, ಪೀಠೋಪಕರಣ, ಮುದ್ರಣ, ರೇಖನಾ/ಲೇಖನಾ ಸಾಮಾಗ್ರಿ ಹಾಗೂ ಇನ್ನಿತರ ವೆಚ್ಚಗಳು)

3. <u>ಈವರೆಗಿನ ಪ್ರಗತಿ</u> :–

<u>ಈವರೆಗೆ ಸಾಧಿಸಿದ ಒಟ್ಟಾರೆ ಪ್ರಗತಿಯ ಹೆಗ್ಗುರುತುಗಳ ಸಂಕ್ಷಿಪ್ತ ಮಾಹಿತಿ</u>:–

- ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಿಂದ ಬರುವ ಕಟ್ಟಡ ನಿರ್ಮಾಣದ ಕಡತಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಮತ್ತು ತಾಂತ್ರಿಕ ಅನುಮೋದನೆ ನೀಡಲಾಗಿದೆ.
- ಭೂ ಪರಿವರ್ತನೆ ಸಂಬಂಧದ ಪ್ರಕರಣಗಳಿಗೆ ತಾಂತ್ರಿಕ ಅಭಿಪ್ರಾಯವನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿದೆ.
- ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡಲಾಗಿದೆ.

4. ಸಂಪನ್ಮೂಲಗಳ ಕ್ರೋಢೀಕರಣ :–

- ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ) – ಯಾವುದೂ ಇಲ್ಲ.
- ಮುನಿಸಿಪಾಲಿಟಿ ನಿಧಿ – ಯಾವುದೂ ಇಲ್ಲ.

2021–22 ನೇ ಸಾಲಿನ ಅಯವ್ಯಯ :

2021–22ನೇ ಸಾಲಿಗೆ ಒದಗಿಸಿದ ಆಯವ್ಯಯದ ಸಂಕ್ಷಿಪ್ತ ವಿವರ:

ವಿವರ	2021–22 ನೇ ಸಾಲಿನ ಅಂದಾಜು
1	2
ಪ್ರಾರಂಭಿಕ ಶಿಲ್ಕು	**48,94,307**
ಜಮೆಗಳು	**45,05,000**
ಒಟ್ಟು	**93,99,307**
ಖರ್ಚುಗಳು	**74,35,000**
ಮಾರ್ಚ್ ಅಂತ್ಯಕ್ಕೆ ಅಖೈರು ಶಿಲ್ಕು	**19,64,307**

5. 2021–22 ರ ಜಮಾ ಮತ್ತು ವೆಚ್ಚ :–

2021–22 ನೇ ಸಾಲಿನಲ್ಲಿ ಒದಗಿಸಿದ ಅಯವ್ಯಯದಲ್ಲಿನ ದಿನಾಂಕ: 31–01–2022 ರವರೆಗೆ ನಿರ್ವಹಿಸಲಾದ ಜಮಾ ಮತ್ತು ವೆಚ್ಚದ ವಿವರ :

ವಿವರ	2021–22 (ದಿ: 31–01–2022 ರವರೆಗೆ) ನೇ ಸಾಲಿನ ಜಮಾ ಮತ್ತು ವೆಚ್ಚ
1	2
ಪ್ರಾರಂಭಿಕ ಶಿಲ್ಕು	**47,92,927**
ಜಮೆಗಳು	**48,73,340**
ಒಟ್ಟು	**96,66,267**
ಖರ್ಚುಗಳು	**31,01,428**
ಜನವರಿ 2022 ರ ಅಂತ್ಯಕ್ಕೆ ಅಖೈರು ಶಿಲ್ಕು	**65,64,839**

6. ಭೌತಿಕ ಪ್ರಗತಿ :– 2021–22 ನೇ ಸಾಲಿನಲ್ಲಿ ಸಾಧಿಸಿದ ಭೌತಿಕ ಪ್ರಗತಿ ವಿವರ :

- ಭೂ–ಪರಿವರ್ತನೆ ಸಂಬಂಧದ 56 ಪ್ರಕರಣಗಳಿಗೆ ತಾಂತ್ರಿಕ ಅಭಿಪ್ರಾಯವನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗಿದೆ.
- ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ 01 ಖಾಸಗಿ ಬಡಾವಣೆಗಳಿಗೆ ಅನುಮೋದನೆ ನೀಡಲಾಗಿದೆ.
- ಕುಶಾಲನಗರ ಯೊಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಪಟ್ಟಣ ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿಗಳಿಂದ ಬರುವ ಕಟ್ಟಡ ನಿರ್ಮಾಣದ 88 ಕಡತಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗಿದೆ.

7. ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ :–

- ಪ.ಜಾತಿ ಮತ್ತು ಪ.ಪಂಗಡಗಳ (ಶೇ.24.10) – ಯಾವುದೂ ಇಲ್ಲ
- ಬಡಜನರ ಕಲ್ಯಾಣ ನಿಧಿ (ಶೇ.7.25) – ಯಾವುದೂ ಇಲ್ಲ
- ದಿವ್ಯಾಂಗರ ಕಲ್ಯಾಣ ನಿಧಿ (ಶೇ.5) – ಯಾವುದೂ ಇಲ್ಲ

8. ವಿಶೇಷ ಸಾಧನೆ/ಪ್ರಶಸ್ತಿ :– ಯಾವುದೂ ಇಲ್ಲ

9. 2022–23ನೇ ವರ್ಷದ ಗುರಿ :–

- ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಮಹಾಯೋಜನೆ (ಅಂತಿಮ)–2031 ಅನ್ನು ಬಹುತೇಕ ಸಿದ್ಧಪಡಿಸಲಾಗಿದ್ದು, ಸದರಿ ಮಹಾಯೋಜನೆಯ (ಅಂತಿಮ) ನಕ್ಷೆ ಮತ್ತು ವರದಿಯನ್ನು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರ ಮೂಲಕ ಸರ್ಕಾರದ ಅನುಮೋದನೆಗೆ ಮಾರ್ಚ್ 2022 ರಲ್ಲಿ ಸಲ್ಲಿಸಲಾಗುವುದು.
- ಮಾಸ್ಟರ್ ಪ್ಲಾನ್ ರೀತ್ಯಾ ಪ್ರಸ್ತಾವಿಸಿರುವ ಮುಖ್ಯ ರಸ್ತೆಗಳನ್ನು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಹಣಕಾಸಿನ ನೆರವುನೊಂದಿಗೆ ಅಭಿವೃದ್ಧಿಪಡಿಲಾಗುವುದು.
- ಮಾಸ್ಟರ್ ಪ್ಲಾನ್‌ನಲ್ಲಿ ಸಾರ್ವಜನಿಕ ಉದ್ದೇಶಗಳಿಗಾಗಿ ಕಾಯ್ದಿರಿಸಲಾದ ವಿವಿಧ ಭೂಮಿಗಳನ್ನು ಭೂ–ಸ್ವಾಧೀನಪಡಿಸಿ ಅದೇ ಉದ್ದೇಶಕ್ಕೆ ಅಭಿವೃದ್ದಿಪಡಿಸಲು ಪ್ರಯತ್ನಿಸಲಾಗುವುದು.
- ಕೆರೆ ಅಭಿವೃದ್ಧಿ ಪ್ರಾಧಿಕಾರ ಸೂಚಿಸಿದ ಕೆರೆಗಳಿಗೆ ಸಹಾಯಧನ ನೀಡಲಾಗುವುದು.
- ಯೋಜನಾ ಪ್ರಾಧಿಕಾರದ ಈಗ ಇರುವ ವ್ಯಾಪ್ತಿಯನ್ನು ವಿಸ್ತರಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು.

ಸದಸ್ಯ ಕಾರ್ಯದರ್ಶಿ
ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ